**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ**

ಅಸಲು ದಾವೆ ನಂ**. 1117/2013** ದಿನಾಂಕಃ **20.01.2026**
ಪಿ.ಡಬ್ಲೂಃ**-01**

**: ಸಾಕ್ಷಿಯನ್ನು ಕರೆಯಿಸಿ ಪ್ರಮಾಣಕರಿಸಲಾಯಿತು :**
* * *

ಪಾಟೀ ಸವಾಲುಃ **5ನೇ ಪ್ರತಿವಾದಿ ಪರ ವಕೀಲರಾದ ಶ್ರೀ. RLP ರವರಿಂದಃ-**

1ನೇ ವಾದಿಯ ಅಧಾರ ಕಾರ್ಡ, ರೇಶನ ಕಾರ್ಡ, ಚುನಾವಣಾ ಗುರುತಿನ ಚೀಟಿ ನಾವು ವಾದ ಪತ್ರದಲ್ಲಿ ಹೇಳಿರುವ ವಿಳಾಸದ್ದಾಗಿರುತ್ತದೆ. 2ನೇ ವಾದಿಯದು ಸಂಕೋನಟ್ಟಿ ಗ್ರಾಮದಲ್ಲಿದೆ. 2ನೇ ವಾದಿಯು ಅಸ್ತಮಾ ಕಾಯಿಲೆಯಿಂದ ಬಳಲುತ್ತಿದ್ದಾರೆ. 1ನೇ ವಾದಿ ಬಿಪಿ, ಶುಗರ ಕಾಯಿಲೆಯಿಂದ ಬಳಲುತ್ತಿದ್ದಾರೆ. ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಇರುವ ಮೇಲ್ಮನವಿ ಅರ್ಜಿಯಲ್ಲಿ ಸಾಕ್ಷಿ ನಡಿಯಲು 1 ಮತ್ತು 2ನೇ ಪ್ರತಿವಾದಿಯರು ಬಂದಿದ್ದರು ಎಂದರೆ ಸರಿ. ಅದರಲ್ಲಿ ಸರಿಯಾಗಿ ಸಾಕ್ಷಿ ಹೇಳದ ಕಾರಣ ಯಾವುದೇ ಅನಾರೋಗ್ಯ ಇಲ್ಲದೆ ಇದ್ದರೂ ನನಗೆ ಸುಳ್ಳು ಅಧಿಕಾರ ಪತ್ರ ನೀಡಿದ್ದಾರೆ ಎಂದರೆ ಸರಿಯಲ್ಲ.

ದಾವಾಸ್ತಿಯ ಉತ್ತರ ಭಾಗದಲ್ಲಿ ಕಾಂಕ್ರೀಟ ರಸ್ತೆಯಿದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಮತ್ತು ವಾದ ಪತ್ರದಲ್ಲಿರುವ ವಂಶಾವಳಿಗಳಲ್ಲಿ ವ್ಯತ್ಯಾಸವಿದೆ ಎಂದರೆ ಸರಿ. 1ನೇ ಪ್ರತಿವಾದಿಯು ದಾವಾಸ್ತಿಯನ್ನು 1970 ರಲ್ಲಿ ಖರೀದಿ ಮಾಡಿದ್ದ ಎಂದರೆ ಸರಿ. ಅದರಂತೆ 1ನೇ ಪ್ರತಿವಾದಿ ಅದರ ಕಬ್ಜಾ ವಹಿವಾಟು ಮಾಡುತ್ತಿದ್ದ ಎಂದರೆ ಸರಿ. 5ನೇ ಪ್ರತಿವಾದಿ ಖರೀದಿ ಮಾಡಿರುವ ಜಮೀನಿನ ಚಕಬಂದಿ ಪೂರ್ವಕ್ಕೆ 1ನೇ ಪ್ರತಿವಾದಿಗೆ ಸೇರಿದ ಜಮೀನು, ಪಶ್ಚಿಮಕ್ಕೆ ಬಾಕಿ ಉಳಿದ ಜಮೀನು, ದಕ್ಷಿಣಕ್ಕೆ ಈರಪ್ಪ ರಾಮಪ್ಪ ಠಕ್ಕನ್ನವರ ರವರ ಜಮೀನು, ಉತ್ತರಕ್ಕೆ 10 ಅಡಿ ಕಾಂಕ್ರೀಟ ರಸ್ತೆಯಿದೆ ಎಂದರೆ ಸರಿ. ಸದರಿ ಜಮೀನು ದಿಃ 20-03-2007 ರಂದು ಮಾಡಿದ್ದಾನೆ ಎಂದರೆ ಸರಿ. 5ನೇ ಪ್ರತಿವಾದಿ ಖರೀದಿ ಮಾಡಿದ ನಂತರ 5ನೇ ಪ್ರತಿವಾದಿ ಅದರಲ್ಲಿ ದ್ರಾಕ್ಷಿ ಬೆಳೆ ಮತ್ತು ಅದಕ್ಕೆ ಪೈಪಲೈನ ಮಾಡಿದ್ದಾರೆ ಎಂದರೆ ಸರಿ. ಅದರಂತೆ ಸದರಿ ಜಮೀನಲ್ಲಿ ಒಂದು RCC ಮನೆ ಕಟ್ಟಿಕೊಂಡಿದ್ದಾನೆ ಎಂದರೆ ಸರಿ. ಅದು ಸಂಕೋನಟ್ಟಿ ಗ್ರಾಮದ ಪಂಚಾಯತಿಯಲ್ಲಿ ಉತಾರ ನಮೂದಾಗಿದೆ ಎಂದರೆ ಸರಿ. ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಜಮೀನಿನನ್ನು ರೂ. 90 ಸಾವಿರಗಳಿಗೆ ಖರೀದಿ ಮಾಡಿದ್ದಾನೆ ಎಂದರೆ ಸರಿ. 1ನೇ ಪ್ರತಿವಾದಿ ಮತ್ತು ಆತನ ಗಂಡು ದಾವಾಸ್ತಿಯಲ್ಲಿ 1ಎಕರೆ 38 ಗುಂಟೆ 5ನೇ ಪ್ರತಿವಾದಿಗೆ ಮಾರಾಟ ಮಾಡಿ ಅದರಿಂದ ಬಂದ ಹಣದಿಂದ ಬೆಂಡಿಗೇರಿ ಗ್ರಾಮದ ವ್ಯಾಪ್ತಿಯಲ್ಲಿ 3 ಹೆಕ್ಟರ 76 ಆರ ಜಮೀನು ಖರೀದಿ ಮಾಡಿದ್ದಾರೆ ಎಂದರೆ ಸರಿ. ಆ

ಸಂದರ್ಬದಲ್ಲಿ 5ನೇ ಪ್ರತಿವಾದಿಯು ರೂ.5,70,000/-ಗಳನ್ನು DD ಮೂಲಕ ಕೊಟ್ಟಿದ್ದ ಎಂದರೆ ಸರಿ. ಅಸಲು ದಾವಾ ನಂ.511/2007 ರ ದಾವೆಯಲ್ಲಿ ಅಪಸಾತ ಡಿಕ್ರಿಯಾಗಿದೆ ಎಂದರೆ ಸರಿ. ಸದರಿ ಅಪಸಾತ ಡಿಕ್ರಿಯಂತೆ 19 ಗುಂಟೆ 1ನೇ ಪ್ರತಿವಾದಿಗೆ ಬಂದಿದೆ ಎಂದರೆ ಸರಿ. ಈ ಹಿಂದೆ ಅಸಲು ದಾವಾ ನಂ.38/2009 ರಂತೆ ಒಂದು ದಾವೆ ಹಾಡಲಾಗಿತ್ತು ಎಂದರೆ ಸರಿ. ಸದರಿ ದಾವೆಯನ್ನು ಸಹ ವಾದಿಯರು ಮತ್ತು 2ನೇ ಪ್ರತಿವಾದಿ ಕೂಡಿ ಹೂಡಿದ್ದರು ಎಂದರೆ ಸರಿ. ಆ ದಾವೆ ವಜಾ ಆಗಿದೆ ಎಂದರೆ ಸರಿ. ಅದಾದನಂತರ ಅಸಲು ದಾವಾ ನಂ.1981/2011 ರಲ್ಲಿ ಪಾಲು ವಾಟ್ನಿ ಕೋರಿ ಒಂದು ದಾವೆ ಹೂಡಿದ್ದರು ಎಂದರೆ ಸರಿ. ಆ ದಾವೆಯು ಸಹ ವಜಾ ಆಗಿದೆ ಎಂದರೆ ಸರಿ. ಸದರಿ ತೀರ್ಪನ ವಿರುದ್ದ ಮಿಸಲೇನಿಯಸ ಸಂಖ್ಯೆ 18/2013 ರಂತೆ ಅರ್ಜಿ ಸಲ್ಲಿಸಿದ್ದೇವು ಎಂದರೆ ಸರಿ. ಅದು ಸಹ ವಜಾ ಆಗಿದೆ ಎಂದರೆ ಸರಿ. ಹಿಂದಿನ ದಾವೆಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ. ಈ ರೀತಿ ಹಿಂದಿನ ದಾವೆಗಳ ಆದೇಶಗಳ ಬಗ್ಗೆ ತಿಳಿದಿದ್ದರು ವಿನಾಕಾರಣ 5ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 5ನೇ ಪ್ರತಿವಾದಿ ಖರೀದಿ ಮಾಡಿದ ನಂತರ ಸರ್ಕಾರಕ್ಕೆ ಕಂದಾಯ ಪಾವತಿ ಮಾಡುತ್ತಿದ್ದಾನೆ ಎಂದರೆ ಸರಿ.

5ನೇ ಪ್ರತಿವಾದಿ ಖರೀದಿ ಮಾಡಿರುವ ಜಮೀನಿನ ಪೂರ್ವಕ್ಕೆ ಇರುವ ಹಾಗೂ 1ನೇ ಪ್ರತಿವಾದಿಗೆ ಸೇರಿದ ಜಮೀನಿನ ಕಬ್ಜಾ ವಹಿವಾಟು 5ನೇ ಪ್ರತಿವಾದಿ ಕಬ್ಜಾ ವಹಿವಾಟು ಹೊಂದಿದ್ದಾನೆ ಎಂದರೆ ಸರಿ. 1ನೇ ಪ್ರತಿವಾದಿಯು ಆ ಜಮೀನಿನನ್ನು ಸಹ ಮಾರಾಟ ಮಾಡುವ ಇಚ್ಛೆ ಹೊಂದಿದ್ದಾನೆ ಎಂದರೆ ಸರಿಯಲ್ಲ. ವಾದಿಯರು ಸಲ್ಲಿಸಿರುವ ಖೊಟ್ಟಿ ದಾವೆಯಲ್ಲಿ ದಾವೆಯ ಪೂರಕವಾಗಿ ನಾನು ಖೊಟ್ಟಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

(ಓಂಕಾರಮೂರ್ತಿ ಹೆಚ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ